ಒಂದು ನಿಮಿಷ ಆರೂ ಮನಿಯೊಳಗೆ ಕರ್ಕಂಡ ಬನ್ನಿ' ಎಂದು ಗೋಳಿಟ್ಟಳು. ಅಲ್ಲಿಯೇ ಪಕ್ಕದ ಕುರ್ಚಿಯಲ್ಲಿ ನಡುಗುತ್ತಾ ಕುಳಿತಿದ್ದ ಚಿಕ್ಕಪ್ಪ, 'ಪೋಸ್ಟ್ ಮಾರ್ಟಂ ಆದ ಹೆಣ. ಮನಿಯೊಳಗೆ ತಪ್ಪೂದು ಬೇಡ. ಯಾವ್ದೇ ಶಾಸ್ತ್ರ ಗೀಸ್ತ್ರ ಬೇಡ. ಸೂರ್ಯ ಬ್ಯಾರೇ ಮುಳಗ್ತಿದ್ದ. ಹಾಗೇ ಬೇಗಬೇಗ ಮುಗ್ಸಿ ಬಿಡಿ' ಎಂದಾಗ ಉಳಿದವರೆಲ್ಲ ತಲೆಯಾಡಿಸಿದರು.

ಶವ ಚಟ್ಟವೇರಿತು. ಮನೆಯವರು ಒಬ್ಬೊಬ್ಬರಾಗಿ ಬಂದು ಶವದ ಬಾಯಿಗೆ ಅಕ್ಕಿಕಾಳು ಹಾಕಿ, ನೀರು ಬಿಡುವ ಸಂದರ್ಭದಲ್ಲಿ ಮೂವರು ತಂಗಿಯರು ಬಂದು ಇವನನ್ನು ಹಿಡಿದುಕೊಂಡು ಗೋಳೋ ಎಂದು ಅತ್ತರು. ಆದರೂ, ಇವನ ಕಣ್ಣು ತೇವವಾಗಲೇ ಇಲ್ಲ.

'ನನ್ನೊಳಗಿನ ಮನುಷ್ಯತ್ವವವೇ ಇಲ್ಲವಾಗಿ ಬಿಟ್ಟಿದೆಯೇ? ನಾನು ಮನುಷ್ಯ ರೂಪದಲ್ಲಿನ ಕಲ್ಲೇ? ಬದುಕಿನ ಬಗ್ಗೆ ಮೋಹವನ್ನೇ ಕಳೆದುಕೊಂಡ ಜೀವಂತ ಶವವೇ?'

ನಿಂತಲ್ಲೇ ಆಲೋಚನೆಯ ಸಾಗರದಲ್ಲಿ ಮಿಂದೆದ್ದ.

ಬೆಳಗಿನಿಂದ ಒಂದೇ ಒಂದು ಹನಿ ನೀರು ಕುಡಿದಿರಲಿಲ್ಲ. ಕುಡಿಯುವ ಮನಸ್ಸೂ ಆಗಿರಲಿಲ್ಲ. ದೇಹ ಸೋಲುತ್ತಿತ್ತು. ಮನಸ್ಸು ಕೂಡ ಸತ್ತಿತ್ತು. ಆ ನಡುವೆಯೂ ನೆಪ ಮಾತ್ರಕ್ಕೆ ತಂಗಿಯರನ್ನು ತಬ್ಬಿಕೊಂಡು ಸಾಂತ್ವನ ಹೇಳಿದ.

ಮನೆಯವರೆಲ್ಲ ಹಿಂದೆ ಸರಿದ ಮೇಲೆ, ಇವ ಮುಂದೆ ಹೋಗಿ ಕೊನೆಯವನಾಗಿ ಬಾಗಿ ನಿಂತು ಶವದ ಬಾಯಿಗೆ ನಾಲ್ಕು ಅಕ್ಕಿಕಾಳು ಹಾಕಿ, ನೀರು ಬಿಟ್ಟ. ಆಗ ಶವವಾಗಿ ಮಲಗಿದ್ದ, ಬಿಳಿಯ ಬಟ್ಟೆಯಲ್ಲಿ ಒಪ್ಪವಾಗಿ ಕಟ್ಟಿದ್ದ ಅಣ್ಣನ ಮುಖ ಕಣ್ಣಿಗೆ ಬಿತ್ತು.

'ಇದೇ ಅಂಗಳದಲ್ಲಿ ಅಲ್ಲವೇ? ಇದೇ ಅಣ್ಣನ ಜೊತೆ ಕಬಡ್ಡಿ ಆಡುತ್ತಾ ಹೊಡೆದಾಡಿದ್ದು. ಎದುರಿದ್ದ ಅದೇ ಗದ್ದೆಯಲ್ಲಿ ನಾವಿಬ್ಬರೂ ಜೊತೆಯಾಗಿ ನೆಟ್ಟಿಯ ಸಂದರ್ಭದಲ್ಲಿ, ಸುರಿವ ಮಳೆಯ ನಡುವೆ ನೆನೆಯುತ್ತಾ ಅಗೆ ಎಸೆದಿದ್ದು. ಯುಗಾದಿ ಹಬ್ಬದ ಆಚೀಚೆ ಪಕ್ಕದ ಭಟ್ಟರ ಮಾವಿನ ತೋಟಕ್ಕೆ ನುಗ್ಗಿ ಕಾಯಿಗಳನ್ನು ಕದ್ದಿದ್ದು. ಮನೆಯ ಹಿಂದಿನ ಮೇಲಿದ್ದ ಗುಡ್ಡದಲ್ಲಿನ ಕಾಡಿಗೆ ಹೋಗಿ ಹಲಸಿನ ಕಾಯಿ ಹುಡುಕಿ ತಲೆಯ ಮೇಲೆ ಹೊತ್ತು ತಂದಿದ್ದು. ಹಡಿ ಮಂಚದ ಮೇಲೇರಿ ನಿಂತು ಬಲ್ಲಿರೇನಯ್ಯಾ ಎಂದದ್ದು. ಪಕ್ಕದ ಕಂಬಳ ಗದ್ದೆಯಲ್ಲಿ ಹೋರಿ ಕಟ್ಟಿ ಕಂಬಳದ ರೇಸ್ ಮಾಡಿದ್ದು...'

ನೆನಪುಗಳು ಉಕ್ಕಿದಾಗ ಎದೆ ತುಂಬಿ ಬಂತು. ಆದರೂ, ನೋವನ್ನು ಬಿಗಿ ಹಿಡಿದು ಚಟ್ಟದ ಮುಂಭಾಗಕ್ಕೆ ಹೆಗಲು ಕೊಟ್ಟ. ತಮ್ಮ ಪಕ್ಕದಲ್ಲಿ ಹೆಗಲು ಹಾಕಿದ್ದ. ಎದುರು ಅಣ್ಣನ ಮಗ ಕೈಯಲ್ಲಿ ಅಗ್ನಿ ತುಂಬಿದ್ದ ಮಡಿಕೆಯನ್ನು ಹಿಡಿದು, ತಲೆ ತಗ್ಗಿಸಿ ಹೆಜ್ಜೆ ಹಾಕಿದ್ದ. ಉಳಿದಂತೆ ನೆಂಟರಿಷ್ಟರು ಹಿಂದೆ ಹೆಜ್ಜೆ ಹಾಕಿದ್ದರು.

ಮನೆಯ ಮುಂದಿನ ತೊಡಮೆ ದಾಟಿ, ಅಡಕೆ ತೋಟದ ನಡುವೆ ಹಾದು, ಎದುರಿನ ಗದ್ದೆಯಂಚಿನ ಹಾಡಿಗೆ ಹೋಗಿ, ಕೊನೆಯಲ್ಲಿ ಸಿದ್ಧವಾಗಿ ನಿಂತಿದ್ದ ಕಟ್ಟಿಗೆಯ ರಾಶಿಯ ಮೇಲೆ ಶವವಿಟ್ಟರು. ಸೆಟೆದು ಬಾಗಿದ್ದ ಪುರೋಹಿತ ಅಂತಿಮ ಕ್ರಿಯಾವಿಧಿ ಮುಗಿಸಿದ ಮೇಲೆ ಅಣ್ಣನ ಮಗ ತಲೆಯ ಭಾಗದಲ್ಲಿ ಹೋಗಿ ಬೆಂಕಿಯಿಟ್ಟ. ಒಣಗಿದ ಕಟ್ಟಿಗೆ, ಕೆಳಗೆ ಜೋಡಿಸಿದ್ದ ತೆಂಗಿನ ಗರಿಗಳು, ಸುರಿದಿದ್ದ ನಂದಿನಿ ತುಪ್ಪ... ಬೆಂಕಿ ಧಗ್ಗೆಂದು ಹತ್ತಿಕೊಂಡಿತು.

ಅರ್ಧ ಗಂಟೆ... ಉರಿವ ಚಿತೆಯ ಎದುರು ನಿಂತ ಒಬ್ಬೊಬ್ಬರೇ ಕರಗಿ ಎದುರಿಗೆ ಉಳಿದಿದ್ದು ಇವ ಮತ್ತು ತಮ್ಮ ಮಾತ್ರ. ಚಿತೆಗೆ ಬೆಂಕಿ ಬಿದ್ದ ಕ್ಷಣದಿಂದ ಕಲ್ಲಾಗಿ ನಿಂತಿದ್ದ ಇವನ ಬಳಿ ಬಂದ ತಮ್ಮ, ನಿಧಾನವಾಗಿ ಹೆಗಲ ಮೇಲೆ ಕೈಹಾಕಿ, 'ಬಾ ಮನೀಗೆ ಹೋಪಾ' ಎಂದು ಹೇಳಿದಾಗ, ಇವನ ಕಣ್ಣಂಚಲ್ಲಿ ಒಂದು ಹನಿ ನೀರು ಉದುರಿತು. ತಮ್ಮನ ಕೈಹಿಡಿದು ಮನೆಯತ್ತ ಹೆಜ್ಜೆ ಹಾಕಿದ.

ಯಾಕೋ ಮನೆಯೊಳಗೆ ಹೋಗಬೇಕು ಎಂದೆನ್ನಿಸಲಿಲ್ಲ. ಎದುರಿನ ಜಗಲಿಯ ಮೇಲೆ ಹೋಗಿ ಕೂತು ಒಂದು ಗಂಟೆಯವರೆಗೆ ಯಾರೂ ಇವನನ್ನು ಮಾತನಾಡಿಸುವ ಧೈರ್ಯ ಮಾಡಲಿಲ್ಲ. ಕೊನೆಗೆ, ಕಿರಿಯ ತಂಗಿ ಬಂದು, 'ಅಣ್ಣಾ ಬಚ್ಚಲಗೆ ನೀರ ಕಾದೀತ. ಹೋಯ್ ಸ್ನಾನ ಮಾಡಿ ಬಂದ ಗಂಜಿ ಕುಡಿ' ಎಂದಳು. ಪಕ್ಕದಲ್ಲಿಯೇ ಕೂತಿದ್ದ ಅವಳ ಕೈಹಿಡಿದ ಇವ, 'ಯಾಕೋ ಏನಕ್ಕೂ ಮನಸ್ಸಿಲ್ಲ. ನೀವೆಲ್ಲ ಗಂಜಿ ಕುಡೀನಿ' ಎಂದು ಹಾಗೆಯೇ ಕುಳಿತು ಬಿಟ್ಟ.

ಸಂಜೆ ಏಳು. ಮನೆಯ ಜಗಲಿಯಂಚಿನಲ್ಲಿ ಕೂತಿದ್ದ